ಊ) ಹಾಗಿದ್ದಲ್ಲಿ, ಅನುದಾನವನ್ನು ನಿಗದಿಪಡಿಸಲಾಗಿರುವ ಪ್ರಮಾಣ ಎಷ್ಟು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಚೆಕ್ ಡ್ಯಾಂ ನಿರ್ಮಿಸುವುದರಿಂದಲೂ ಉಪಯೋಗವಾಗುವುದು.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ಆನೆಗಳ ಹಾವಳಿಗಳು

352 (70) ಶ್ರೀ ರಾಜು .ಕೆ (ರಾಮನಗರ): ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಕ್ಷೇತ್ರದ ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿಯ ಸುಮಾರು ಗ್ರಾಮಗಳು ಅರಣ್ಯ ಪ್ರದೇಶಗಳಿಗೆ ಹೊಂದಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಗ್ರಾಮಗಳ ರೈತರು ಬೆಳೆಯುವ ಬೆಳೆಗಳು ಆನೆಗಳ ಹಾವಳಿಯಿಂದ ನಷ್ಟಕ್ಕೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಗ್ರಾಮಗಳ ರೈತರಿಗೆ ಬೆಳೆ ಪರಿಹಾರ ಧನವನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಪ್ರತಿ ಎಕರೆಗೆ ಕನಿಷ್ಠ 20 ಸಾವಿರ ರೂ.ಗಳನ್ನು ಪರಿಹಾರವಾಗಿ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು;

ಉ) ಮೇಲ್ಕಂಡ ಗ್ರಾಮಗಳ ರೈತರು ಆನೆಗಳ ದಾಳಿಗೆ ತುತ್ತಾಗಿ ಸಾವನ್ನಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಸಾವಿಗೀಡಾದ ರೈತರಿಗೆ ಸರ್ಕಾರ ನೀಡಿರುವ ಪರಿಹಾರ ಧನದ ಮೊತ್ತವೆಷ್ಟು;

ಋ) ಪ್ರಸಕ್ತ ನೀಡುತ್ತಿರುವ ಪರಿಹಾರದ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು;

ಎ) ಕನಕಪುರ ತಾಲ್ಲೂಕಿನಲ್ಲಿ ಆನೆಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು):

ಅ) ಹೌದು.

ಆ) ಹೌದು.

ಇ) ಸರ್ಕಾರದ ಆದೇಶ ಸಂಖ್ಯೆ ಅಪಜೀ 162 ಎಫ್‌ಡಬ್ಲ್ಯೂಎಲ್ 2008 ದಿನಾಂಕ: 05.06.2009ರ ಪ್ರಕಾರ ನಷ್ಟವಾದ ಬೆಳೆಯ ಪರಿಮಾಣಕ್ಕೆ ನಿಗದಿಪಡಿಸಿದ ದರದಂತೆ ದಯಾತ್ಮಕ ಧನ ಪಾವತಿಸಲಾಗುತ್ತಿದೆ.

2010–11ನೇ ಸಾಲಿನ ಜನವರಿ 2011ರ ವರೆಗೆ ರಾಮನಗರ ಜಿಲ್ಲೆಯಲ್ಲಿ 1349 ಬೆಳೆನಾಶ ಪ್ರಕರಣಗಳಿಗೆ 56,54,772/– ರೂ.ಗಳ ಪರಿಹಾರ ಧನವನ್ನು ಈಗಾಗಲೇಲ ಪಾವತಿಸಲಾಗಿರುತ್ತದೆ. ಇನ್ನು 1215 ಬೆಳೆಹಾನಿ ಪ್ರಕರಣಗಳಿಗೆ ಪಾವತಿಸಲು ರೂ. 24,00,985/– ಬಾಕಿ ಇದ್ದು, ಶೀಘ್ರದಲ್ಲಿ ಪಾವತಿಸಲಾಗುವುದು.

ಸರ್ಕಾರವು ವನ್ಯಪ್ರಾಣಿಗಳಿಂದ ನಷ್ಟವಾದ ವಿವಿಧ ಬೆಳೆಗಳಿಗೆ ಪ್ರತಿ ಕ್ವಿಂಟಾಲ್‌ಗೆ ಸರ್ಕಾರದ ಆದೇಶ ಸಂಖ್ಯೆ ಅಪಜೀ 162 ಎಫ್‌ಡಬ್ಲ್ಯೂಎಲ್ 2008 ದಿನಾಂಕ: 05.06.2009ರಲ್ಲಿ ದರ ನಿಗದಿಪಡಿಸಿರುವಂತೆ, ಬೆಳೆ ಹಾನಿಯನ್ನು ಲೆಕ್ಕ ಮಾಡಿ ರೂ. 5,800/–ವರೆಗೆ ಪೂರ್ಣ ಬೆಳೆಹಾನಿ ಮೊತ್ತ ಪಾವತಿಸಲಾಗುತ್ತಿದೆ.

- ರೂ. 5,801,– ರಿಂದ 29,000/–ವರೆಗಿನ ಮೊತ್ತದ ಬೆಳೆನಾಶಕ್ಕೆ 5,820/–. ಅದಕ್ಕೂ ಮೀರಿದ ಬೆಳೆ ನಷ್ಟದ ಮೊತ್ತದ ಶೇ. 50ರಷ್ಟು ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ. 17,500/–
- ರೂ. 29,000/– ಮತ್ತು ಅದಕ್ಕೂ ಮೇಲ್ಪಟ್ಟ ಮೊತ್ತದ ಬೆಳೆನಾಶಕ್ಕೆ 17,500/– ಮತ್ತು ಅದಕ್ಕೂ ಮೀರಿದ ಬೆಳೆ ನಷ್ಟದ ಮೊತ್ತದ ಶೇ. 30ರಷ್ಟು ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ. 45,000/–

ಆದರೆ ಪ್ರತಿ ಎಕರೆಗೆ ಇಷ್ಟು ಎಂದು ನಿಗದಿಪಡಿಸಿರುವುದಿಲ್ಲ. ಏಕೆಂದರೆ ಬೇರೆ ಬೇರೆ ಭೂಮಿಯಲ್ಲಿ ಬೇರೆ ಬೇರೆಯ ಬೆಳೆ ಬೆಳೆಯುವುದರಿಂದ ಬೆಳೆಯ ಬೆಲೆ ನಿಗದಿಪಡಿಸಿ ದಯಾತ್ಮಕ ಧನ ನೀಡಲಾಗುತ್ತಿದೆ.

ಉ) ಹೌದು, 2009–10ರಲ್ಲಿ 3 ಪ್ರಕರಣಗಳು ದಾಖಲಾಗಿವೆ.

ಊ) ಈ ಮೂರು ಪ್ರಕರಣಗಳಲ್ಲಿ ಈಗಾಗಲೇ ಒಂದು ಪ್ರಕರಣಕ್ಕೆ ದಯಾತ್ಮಕ ಧನ ರಊ. 1.50 ಲಕ್ಷ ಮಂಜೂರು ಮಾಡಿ ನೀಡಲಾಗಿರುತ್ತದೆ. ಉಳಿದ

ಎರಡೂ ಪ್ರಕರಣಗಳ ಪೈಕಿ ಒಂದುರಲ್ಲಿ ಕುಟುಂಬ ಜೀವಿತದ ಸದಸ್ಯರ ಪಟ್ಟಿ ಸಲ್ಲಿಸಿಲ್ಲವಾದ್ದರಿಂದ ಕಂದಾಯ ಇಲಾಖೆಯಿಂದ ಪಡೆದು ಸಲ್ಲಿಸಲು ವಲಯ ಅರಣ್ಯಾಧಿಕಾರಿ, ಕನಕಪುರ ಇವರಿಗೆ ತಿಳಿಸಲಾಗಿದೆ. ಇನ್ನೊಂದು ಪ್ರಕರಣದಲ್ಲಿ ಮರಣ ಪ್ರಮಾಣ ಪತ್ರ ಹಾಗೂ ಅಗತ್ಯ ದಾಖಲಾತಿಗಳನ್ನು ಮೃತರ ವಾರಸುದಾರರು ಸಲ್ಲಿಸಿಲ್ಲವಾದ್ದರಿಂದ ಬಾಕಿ ಇರುತ್ತದೆ. ಇದನ್ನು ಪಡೆದು ವಲಯ ಅರಣ್ಯಾಧಿಕಾರಿಗಳು ಸಲ್ಲಿಸಿದ ಕೂಡಲೇ ಈ ಎರಡೂ ಪ್ರಕರಣಗಳಿಗೆ ದಯಾತ್ಮಕ ಧನ ಪಾವತಿಸಲಾಗುವುದು.

ಋ) ಪ್ರಸಕ್ತ ನೀಡುತ್ತಿರುವ ಪರಿಹಾರದ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು, ಶೀಘ್ರವೇ ಕ್ರಮ ಕೈಗೊಳ್ಳುವುದು.

ಎ) ಆನೆ ನಿರೋಧಕ ಕಂದಕಗಳು, ಆನೆ ಕ್ಯಾಂಪುಗಳು ಮತ್ತು ಸೋಲಾರ್ ತಂತಿ ಬೇಲಿ ನಿರ್ಮಾಣ ಮಾಡಲಾಗಿದೆ. ಆನೆಗಳು ಕಾಡಿನಿಂದ ಹೊರಗೆ ಕಂಡುಬಂದಾಗ ಇಲಾಖಾ ಸಿಬ್ಬಂದಿಗಳು ಆನೆ ತಡೆ ಕಾವಲುಗಾರನೊಂದಿಗೆ, ಆಸು-ಪಾಸಿನ ರೈತರ ಸಹಕಾರವನ್ನು ಪಡೆದು, ಪಟಾಕಿ-ಸಿಡಿಮದ್ದುಗಳನ್ನು ಉಪಯೋಗಿಸಿ ಅವುಗಳನ್ನು ಕಾಡಿಗೆ ಹಿಂದಿರುಗಿಸಲಾಗುತ್ತಿದೆ. ಮುಂದುವರೆದು, ಪದೇ ಪದೇ ದಾಳಿ ಮಾಡಿ ಮಾನವ ಹತ್ಯೆಗೆ ಕಾರಣವಾಗುವ ಪುಂಡಾನೆಗಳನ್ನು ದೂರದ ಕಾಡಿಗೆ ಓಡಿಸುವ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಂತರ್ಜಲದ ಮಟ್ಟ ಕುಸಿದಿರುವುದು

353 (71) ಶ್ರೀ ರಾಜು .ಕೆ (ರಾಮನಗರ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಕ್ಷೇತ್ರದಲ್ಲಿ ನೀರಿನ ಅಂತರ್ಜಲ ಮಟ್ಟವು ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಅಂತರ್ಜಲ ಮಟ್ಟವು ಕುಸಿದಿರುವುದರಿಂದ ಗ್ರಾಮೀಣ ಭಾಗದ ರೈತರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) ಹೌದು.